ಇಟ್ಟಿದ್ದ ಟ್ರಾನ್ಸಿಸ್ಟರ್‌ನಲ್ಲಿ ಬಿತ್ತರವಾಗುತ್ತಿದ್ದವು. "ಅಕ್ಕಯ್ಯಮ್ಮ ಯಂಗೂ ಯಾಪಾರ ಜೋರಾಗೇ ನಡಿತಾ ಐತೆ. ಅತ್ತ ಎಂಥದ್ದಾದ್ರೂ ಒಂದು ಟೀವಿ ತಂದಿಟ್ಬಿಡು, ಯಂಗೂ ಒಂದೂವರೆ ತಿಂಗ್ಳು ಮಜಾ ತಗೋಬಹುದು." ಎಂದು ಸುಮಾರು ಜನ ಅಂದಿದ್ದರು. ಅದಕ್ಕೆ ಅಕ್ಕಯ್ಯಮ್ಮ ನಗುತ್ತಾ, "ಅಣೊ ಏನ್ ತಮಾಷೆ ಮಾಡ್ತಿದ್ದಿರೇನು. ಒಂದೆರ್ಡ್ ಗರಿ ಹಾಕ್ಕೊಂಡು ಆಮ್ಲೇಟ್ ಹಾಕ್ತಿದ್ದೀನಿ. ಗುಡ್ಲುಗೆ ಯಾರಾದ್ರು ಕರೆಂಟ್ ಕನೆಕ್ಷನ್ ಕೊಡ್ತಾರ? ಕರೆಂಟ್ ಕೊಡ್ಲಿ ಮತ್ತೆ, ನಾನೊಂದು ಟೀವಿ ಇಡೋಕೆ ರೆಡಿ..." ಎಂದು ನಗುತ್ತಾ ಉತ್ತರ ಕೊಟ್ಟಿದ್ದಳು. ಪೊಲೀಸ್ ನಂಜುಂಡ, "ಅಕ್ಕಯ್ಯಮ್ಮ ಅತ್ತ ಆಮ್ಲೇಟ್ ಅಂಗ್ಡಿಗೆ ಇಲ್ಲೆ ಒಂದು ಬಿಲ್ಡಿಂಗ್ ಎಬ್ಬಿಸಿಬಿಡು, ಗ್ರಾಮ ಪಂಚಾಯ್ತಿಯೋರು ನೀನು ಜಾಗ ಖರೀದಿ ಮಾಡ್ತೀನಿ ಅಂದ್ರೆ ಬೇಡ ಅಂತಾರ..." ಎಂದಿದ್ದ. "ಓಹೋ ಸುಮ್ಕಿರಪ್ಪ ಯಾಸಟ್ಗೆ ದೊಡ್ಡಾತ್ ಮಾತಾಡ್ಬೇಡ." ಎಂದು ಸುಮ್ಮನಾಗಿಸಿದ್ದಳು. ಇಂಥ ಸಂದರ್ಭದಲ್ಲಿ ಒಂದು ದಿನ ಸಾಯಂಕಾಲ ನಾಗರೆಡ್ಡಿ, ರಾಜಣ್ಣ, ರಾಮದಾಸಪ್ಪ ಮಾತನಾಡಿಕೊಂಡು ಆ ಕಡೆ ಬಂದಿದ್ದರು. ಮೂವರೂ ಹಳೆಪಾರ್ಟಿಯ ಮುಖಂಡರೇ. ಊರಿನಲ್ಲಿ ಅವರದೇ ಮಾತು ನಡೆಯುತ್ತಿದ್ದರೂ ಈ ಐದಾರು ವರ್ಷಗಳಿಂದ ಊರಲ್ಲಿ ಬೇರೆ ಬೇರೆ ಪಾರ್ಟಿಗಳಿಂದಲೂ ಸುಮಾರು ಜನ ಮುಖಂಡರು ಎದ್ದುಕೊಂಡಿದ್ದರು. ಹಾಗಾಗಿ, ರಾಜಕೀಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ಸ್ಕೂಲು, ದೇವಸ್ಥಾನ ಮುಂತಾದವುಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಮುಂದೆ ನಿಂತು ಓಡಾಡುತ್ತಿದ್ದರು. ಅಕ್ಕಯ್ಯಮ್ಮ ಮೂವರಿಗೂ ಒಂದೊಂದು ಬೆಣ್ಣೆ ಸವರಿ ಮಾಡಿದ ಆಮ್ಲೇಟನ್ನು ಹಾಕಿಕೊಟ್ಟಿದ್ದಳು. ಬಿಸಿಬಿಸಿ ಆಮ್ಲೇಟನ್ನು ಬಾಯಿಗೆಸೆದುಕೊಂಡು ರಾಮದಾಸಪ್ಪ, "ಸುಮ್ನೆ ಅಂತಿಂಥೋರ್ನ ಎಲೆಕ್ಷನ್ನಿಗೆ ನಿಲ್ಸೊ ಬದ್ಲು ನಮ್ಮ ಹಳೆ ಪಾರ್ಟಿಯಿಂದ ಅಕ್ಕಯ್ಯಮ್ಮನ್ನ ಯಾಕ್ ನಿಲ್ಲಿಸ್ಬಾರ್ದು. ನೀವೇನಂತೀರಿ?" ಎಂದು ನಾಗರೆಡ್ಡಿ ಮತ್ತು ರಾಜಣ್ಣನ ಮುಖ ನೋಡಿದ್ದ. "ಒಳ್ಳೆ ಐಡಿಯಾ ರಾಮದಾಸಪ್ಪ, ಹಂಗ್ನೋಡಿದ್ರೆ ನಮ್ಮ ಅಕ್ಕಯ್ಯಮ್ಮನಿಗಿಂತ ಒಳ್ಳೆ ಲೇಡಿ ಕ್ಯಾಂಡಿಡೇಟ್ ಯಾರಿದಾರೆ ನಮ್ಮೂರಲ್ಲಿ..." ರಾಜಣ್ಣ ಬಿಸಿ ಆಮ್ಲೇಟನ್ನು ಊದಿ ಊದಿ ಬಾಯಿಗಿಟ್ಟುಕೊಂಡಿದ್ದ. "ಯಾಸಟ್ಗೆ ಸುಮ್ಕಿರ್ರಣ್ಣಯ್ಯೋ ಹೆಣ್ಣೆಂಗ್ಸು ನಂಗ್ಯಾಕೆ ಎಲೆಕ್ಷನ್ ಸವಾಸ" ಅಕ್ಕಯ್ಯಮ್ಮ ಎದೆಯಾಳದಿಂದ ಮಾತನಾಡಿದ್ದಳು. ಕೂಡಲೇ ನಾಗರೆಡ್ಡಿ, "ಏನಂದೆ, ಅಕ್ಕಯ್ಯಮ್ಮ ಹೆಣ್ಣೆಂಗ್ಸು ಅಂದ. ಈ ದೇಶಾನ ಹತ್ತಾರು ವರ್ಷ ಆಳಿದ ಇಂದಿರಾ ಗಾಂಧಿ ಹೆಣ್ಣೆಂಗ್ಸ್ ಅಲ್ವೆ. ಪಕ್ಕದ ರಾಜ್ಯ ತಮಿಳುನಾಡಿಗೆ ಜಯಲಲಿತಾ ಮುಖ್ಯಮಂತ್ರಿ ಆಗಿರ್ಲಿಲ್ವೆ. ಎಷ್ಟು ದಕ್ಕಡಿತನದಿಂದ ಆವಮ್ಮ ರಾಜ್ಯಭಾರ ಮಾಡಿದ್ಲು. ಗಂಡು ಮಿನಿಸ್ಟ್ರುಗಳು ಆವಮ್ಮನ ಕಾಲಿಗೆ ಬೀಳ್ತಿದ್ದನ್ನ ನಾನು ಟೀವಿಲಿ ಎಷ್ಟು ಸಾರಿ ನೋಡಿಲ್ಲ. ಅಷ್ಟೇಕೆ, ಆ ಯುಪಿ ಕಡೆ ಮಾಯಾವತಿ, ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ನೋಡೋಕೆ ನಿಂಗಿಂತ್ಲೂ ಕಡೆನೇ ಅಕ್ಕಯ್ಯಮ್ಮ, ಆದ್ರೂ ಮುಖ್ಯಮಂತ್ರಿ ಗಾದಿ ಮೇಲೆ ಕುಂತಿಲ್ವೆ. ಅಷ್ಟೇಕೆ ಇವೊತ್ತಿಗೂ ನಮ್ಮ ಪಕ್ಷದ ಹೈಕಮಾಂಡ್ ಇರೋದು ಸೋನಿಯಾ ಗಾಂಧಿ

